(೪) ಕರ್ನಾಟಕದಲ್ಲಿ ಹಣ್ಣು ತರಕಾರಿ ದಳ್ಳಾಳಿಗಳು ಮಾರ್ಕೆಟುಗಳಲ್ಲಿ ಸಂಪು ಮಾಡಿ ರೈತ ಜನಾಂಗಕ್ಕೆ ಅನ್ಯಾಯದ ಮಾಡಿ ಬಗ್ಗೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಕರ್ನಾಟಕಾದ್ಯಂತ ಹಣ್ಣು ತರಕಾರಿ ದಳ್ಳಾಳಿಗಳು ಮಾರ್ಕೆಟ್ಟುಗಳಲ್ಲಿ ಸಂಪು ಮಾಡಿ ರೈತ ಜನಾಂಗಕ್ಕೆ ಅನ್ಯಾಯ ಮಾಡಿದ್ದಾರೆ, ರೈತರು ಬೆಳೆದು ಮಾರ್ಕೆಟ್‌ಗಳಿಗೆ ತಂದಾಗ ಅಲ್ಲಿನ ದಳ್ಳಾಳಿಗಳು ಅವರಿಗೆ ಕೊಡುವ ಕಿರುಕುಳ, ತೊಂದರೆ, ತುಂಬಾ ಜಾಸ್ತಿಯಾದರು ಶಾಂತಿಯಿಂದ ವಿಧಿ ಇಲ್ಲದೇ ಸಹಿಸಿಕೊಂಡು ಕೊರಗುತ್ತಿದ್ದಾರೆ. ಆದರೂ ಆ ರೈತರಿಗೆ ಸಹಕಾರ ಇಲಾಖೆಯಿಂದ ನ್ಯಾಯ ರಕ್ಷಣೆ ಇಲ್ಲ. ಈಗಲಾದರೂ ಸಹಕಾರ ಇಲಾಖೆಯಂ ಇವರಿಗೆ ನ್ಯಾಯವಾದ ರಕ್ಷಣೆ ಕೊಟ್ಟು ರೈತರ ತರಕಾರಿ ಮತ್ತು ಹಣ್ಣಿನ ವಿತರಣೆಗೆ ರಕ್ಷಣೆ ಕೊಟ್ಟು ರೈತರ ಹಿತಾಸಕ್ತಿಯನ್ನು ಕಾಪಾಡಲು ಕ್ರಮ ಕೈಗೊಳ್ಳುವುದೇ ಇಲ್ಲವೇ ? ರೈತರನ್ನು ಅವರ ಪಾಡಿಗೆ ಅವರನ್ನು ಬಿಟ್ಟು ಸರ್ಕಾರ ನಿದ್ರೆ ಹೋಗಿ ರೈತಾಂಗಕ್ಕೆ ಮೋಸ ಮಾಡುವುದೇ ಈ ಪರಿಸ್ಥಿತಿಯನ್ನು ಸುಧಾರಿಸಲು ಈಗಲಾದರೂ ಸರ್ಕಾರ ಗಮನಕೊಟ್ಟು ರೈತಾಂಗಕ್ಕೆ ಸಹಾಯ ಮಾಡಲು ಮುಂದು ಬರುವುದೇ ಎಂಬ ವಿಷಯವನ್ನು ಸದನದ ಗಮನಕ್ಕೆ ತರಲು ಅನುಮತಿ ಕೋರುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—(ಸಹಕಾರ ಸಚಿವರು) ಕರ್ನಾಟಕದಾದ್ಯಂತ ಮುಷ್ಕರ ನಡೆದಿಲ್ಲ. ಬೆಂಗಳೂರಿನಲ್ಲಿ ಮಾತ್ರ ಕಳೆದ ೮-೧೦ ದಿನಗಳಿಂದ ಹಣ್ಣಿನ ವ್ಯಾಪಾರಸ್ಥರು ಮುಷ್ಕರ ಹೂಡಿದ್ದಾರೆ. ಇವರ ಮುಷ್ಕರಕ್ಕೆ ತರಕಾರಿ ವ್ಯಾಪಾರಸ್ಥರು ತಮ್ಮ ಸಹಾನುಭೂತಿಯನ್ನು ತೋರಿಸಿ ಮುಷ್ಕರವನ್ನು ನಡೆಸಿದ್ದರು. ಈಗ ಅವರು ಮುಷ್ಕರವನ್ನು ಹಿಂತೆಗೆದುಕೊಂಡಿದ್ದಾರೆ. ಹಣ್ಣಿನ ವ್ಯಾಪಾರಸ್ಥರು ಮಾತ್ರ ಇನ್ನೂ ಮುಷ್ಕರವನ್ನು ಹೂಡಿದ್ದಾರೆ. ಈಗ ಈ ವಿಷಯವು ಹೈಕೋರ್ಟಿನ ಮುಂದೆ ಇದೆ. ಇವತ್ತು ಅದರ ಬಗ್ಗೆ ಕೋರ್ಟಿನಲ್ಲಿ ವಿಚಾರಣೆ ಇತ್ತು. ಎಲ್ಲಿ ಅನ್ಯಾಯ ಮಾಡುತ್ತಿದ್ದಾರೆ ಅಂತಹ ವ್ಯಾಪಾರಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಮಾರುಕಟ್ಟೆ ನಿಯಮಕ್ಕೆ ಇವರನ್ನು ಒಳಪಡಿಸುವುದಕ್ಕೆ ನಾವು ಎನ್‌ಫೋರ್ಸ್ ಮಾಡುತ್ತಿದ್ದೇವೆ. ಆದರೆ ಇವರು ವಿಷಯವನ್ನು ಕೋರ್ಟಿಗೆ ತೆಗೆದು ಕೊಂಡು ಹೋಗಿದ್ದಾರೆ, ಇನ್ನು ೨-೩ ದಿನದಲ್ಲಿ ಕೋರ್ಟಿನ ತೀರ್ಮಾನ ಇದರ ಬಗ್ಗೆ ಬರಬಹುದು. ಆ ತೀರ್ಮಾನವನ್ನು ನೋಡಿಕೊಂಡು ರೈತರ ಹಿತ ರಕ್ಷಣೆಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವಂತಹ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

(೫) ತುಮಕೂರು ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಿಸಿದರೂ ಸಾಲ ವಸೂಲಿಯನ್ನು ಖಡ್ಡಾಯ ಮಾಡುವುದು.

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ) — ಮಾನ್ಯ ಅಧ್ಯಕ್ಷರೇ, ತುಮಕೂರು ಜಿಲ್ಲೆಯ ಕೊರಟಗೆರೆ, ಮಧುಗಿರಿ, ಪಾವಗಡ, ಶಿರಾ ಮತ್ತು ಚಿಕ್ಕನಾಯಕನ ಹಳ್ಳಿ ತಾಲ್ಲೂಕುಗಳು ತೀವ್ರ ಬರ ಪೀಡಿತ ಪ್ರದೇಶವೆಂದು ರಾಜ್ಯ ಸರ್ಕಾರ ಈಗಾಗಲೇ ಘೋಷಿಸಿದೆ. ಭೀಕರ ಅಭಾವಕ್ಕೆ ಒಳಗಾಗಿರುವ ಪ್ರದೇಶಗಳ ರೈತರುಗಳಿಂದ ಸಹಕಾರ ಸಂಘಗಳಿಗೆ ಬರಬೇಕಾದ ಸಾಲದ ಬಾಕಿಯನ್ನು ಕಡ್ಡಾಯವಾಗಿ ವಸೂಲು ಮಾಡುವುದಿಲ್ಲವೆಂದು ಸರಕಾರ ಈ ಸದನದಲ್ಲಿ ಕೊಟ್ಟ ಆಶ್ವಾಸನೆಗೂ ಅಧಿಕಾರಿಗಳು ರೈತರಿಂದ ಬರಬೇಕಾದ ಸಾಲಗಳ ವಸೂಲಿಗೆ ಅಧಿಕಾರಿಗಳು ಕೈಗೊಂಡಿರುವ ಹರಾಜು ಜಪ್ತಿ ಮೊದಲಾದ ಕ್ರಮಗಳನ್ನು ನೋಡಿದರೆ ಸರ್ಕಾರ ರೈತರಿಗೆ ಬಾಯಿ ಮಾತಿನ ಅನುಕಂಪ ತೋರಿ ಕಾರ್ಯತಃ ಅವರನ್ನು ಹಿಂಸಿಸಿ ಸಾಲ ವಸೂಲಿ ಮಾಡುವಂತೆ ಕಾಣುತ್ತಿದೆ. ಹಾಗಿದ್ದಲ್ಲಿ ಈ ಸರ್ಕಾರದ ಮಾತಿಗೂ ಹಾಗೂ ಕೃತಿಗೂ ಸಂಬಂಧವಿಲ್ಲವೇ ? ಈ ಸದನದಲ್ಲಿ ಸರ್ಕಾರವು ಕೊಟ್ಟಿರುವ ವಚನವನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ಹಾಗೂ ತೀವ್ರ ಕ್ಷಾಮ ಎದುರಿಸುತ್ತಿರುವ ಜನರಿಗೆ ಸಹಾಯ ಮಾಡುವ ಮಾನವೀಯ ದೃಷ್ಟಿಯಿಂದ ಈ ತಕ್ಷಣ ಸರ್ಕಾರ ಅಭಾವಪೀಡಿತ ಪ್ರದೇಶಗಳ ಅಧಿಕಾರಿಗಳಿಗೆ ರೈತರ ಸಾಲ ವಸೂಲಿಗೆ ತಗಾದೆ ಮಾಡಬಾರದೆಂದು ಆದೇಶ ನೀಡಬೇಕೆಂದು ಈ ಸಂಬಂಧದಲ್ಲಿ ಸಂಬಂಧಪಟ್ಟ ಸಹಕಾರ ಸಚಿವರು ಸದನದಲ್ಲಿ ಹೇಳಿಕೆಯನ್ನು ಕೊಡಬೇಕಾಗಿ ಒತ್ತಾಯಿಸುತ್ತೇನೆ,

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ನಾನು ಹಲವಾರು ಸಾರಿ ಭರವಸೆ ಕೊಟ್ಟಿದ್ದೇನೆ. ಸಣ್ಣ ಮತ್ತು ಅತಿ ಸಣ್ಣ ರೈತರುಗಳು ಮಾಡಿರುವ ಸಾಲವನ್ನು ಕಡ್ಡಾಯವಾಗಿ ವಸೂಲು ಮಾಡುವುದಿಲ್ಲವೆಂದು ಮತ್ತು ಅವರ ಆಸ್ತಿಗಳನ್ನು ಹರಾಜು ಹಾಕುವುದಿಲ್ಲವೆಂದು